ಉಡುಪಿ ಜಿಲ್ಲೆ ಪಡುಬಿದ್ರಿಯಲ್ಲಿ ವಿದ್ಯುತ್ ಯೋಜನೆ

21(14) -ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಪಡುಬಿದ್ರಿಯಲ್ಲಿ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ; ಇದರ ಸಾಮರ್ಥ್ಯ ಎಷ್ಟು; ಈ ಯೋಜನೆಯನ್ನು ಯಾವಾಗಿನಿಂದ ಪ್ರಾರಂಭಿಸಲಾಗಿದೆ.

ಆ) ಆಗಿಲ್ಲದಿದ್ದರೆ ಕಾರಣಗಳೇನು;

ಇ) ಈ ವಿದ್ಯುತ್ ಯೋಜನೆಯನ್ನು ಯಾವ ಕಂಪನಿಗೆ ವಹಿಸಿಕೊಡಲಾಗಿದೆ;

ಈ) ಈ ವಿದ್ಯುತ್ ಕಂಪನಿಯ ಯೋಜನೆಯು ಪೂರ್ಣಗೊಂಡ ನಂತರ ಒಪ್ಪಂದ ಮಾಡಿಕೊಳ್ಳಲಾಗಿದೆಯೇ; ಪ್ರತಿ ಯೂನಿಟ್‌ಗೆ ವಿಧಿಸಿರುವ ದರ ಎಷ್ಟು.

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಉಡುಪಿ ಜಿಲ್ಲೆ ಪಡಬಿದ್ರಿಯಲ್ಲಿ ಒಂದು ಶಾಖೋತ್ಪನ್ನ (ಕಲ್ಲಿದ್ದಲಾಧಾರಿತ) ವಿದ್ಯುತ್ ಘಟಕವನ್ನು ಸ್ಥಾಪಿಸಲು ಮೆಸರ್ಸ್ ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಅನುಮತಿ ನೀಡಲಾಗಿದೆ. ಇದರ ಸಾಮರ್ಥ್ಯ 1015 ಮೆಗಾ ವ್ಯಾಟ್ (2X507.5 ಮೆಗಾ ವ್ಯಾಟ್ ಯೂನಿಟ್‌ಗಳು) ಈ ಯೋಜನೆಯ ನಿರ್ಮಾಣ ಕಾರ್ಯವನ್ನೂ ಪ್ರಾರಂಭವಾಗಿಲ್ಲ.

ಆ) ಮೆಸರ್ಸ್ ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್, ಇವರೊಡನೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲು ಸಲ್ಲಿಸಿರುವ ಕರಡು ಪ್ರತಿಯಲ್ಲಿ ಎಸ್ಕ್ರೋ ಹೊದಿಕೆ ಡೀಮಡ್ ಜನರೇಷನ್ ಹಾಗೂ ರಾಜ್ಯ ಖಾತರಿ ಕಾಲಂಗಳಿದ್ದು ಇವು ರಾಜ್ಯದ ಐ.ಪಿ.ಪಿ. ನೀತಿಗೆ ವಿರುದ್ಧವಾಗಿರುವುದರಿಂದ ರಾಜ್ಯ ಸರ್ಕಾರವು ವಿದ್ಯುತ್ ಖರೀದಿ ಒಪ್ಪಂದಕ್ಕೆ ಅನುಮೋದನೆ ನೀಡಿರುವುದಿಲ್ಲ. ರಾಜ್ಯ ಉಚ್ಚನ್ಯಾಯಾಲಯವು ಇದನ್ನು ಮರು ಪರಿಶೀಲಿಸಲು ಆದೇಶಿಸಿರುವುದರಿಂದ ಸದರಿ ವಿಷಯವು ಸರ್ಕಾರದ ಮರು ಪರಿಶೀಲನೆಯಲ್ಲಿದೆ.

ಇ) ಈ ವಿದ್ಯುತ್ ಯೋಜನೆಯನ್ನು ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್‌ರವರು ವಹಿಸಿಕೊಂಡಿದ್ದಾರೆ.

ಈ) ಕರ್ನಾಟಕ ಸರ್ಕಾರದ ಅನುಮೋದನೆ ದೊರೆತ ನಂತರ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು ಕ್ರಿಸಿಲ್ ಕನ್ಸಲ್ಟೆಂಟ್‌ರವರ ವರದಿಯಂತೆ ಪ್ರತಿ ಯೂನಿಟ್‌ಗೆ ಅಂದಾಜು ರೂ. 3.53 ಗಳಾಗಬಹುದು.

ದೇವನಹಳ್ಳಿ ಬಳಿ ನಿರ್ಮಿಸಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಗತಿ

22(28) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಬಳಿ ಇರುವ ದೇವನಹಳ್ಳಿಯಲ್ಲಿ ನಿರ್ಮಿಸಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಗತಿ ಬಗ್ಗೆ ಪೂರ್ಣ ವಿವರ ನೀಡುವುದು.

ಆ) ಈ ಉದ್ದೇಶಿತ ವಿಮಾನ ನಿಲ್ದಾಣದ ಕಾರ್ಯ ಯಾವಾಗ ಪ್ರಾರಂಭವಾಗುವುದು?

ಶ್ರೀ ಕೆ.ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ರಾಜ್ಯ ಸಚಿವರು)

ಅ) ಬೆಂಗಳೂರಿನ ಬಳಿ ಇರುವ ದೇವನಹಳ್ಳಿಯಲ್ಲಿ ನಿರ್ಮಿಸಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕುರಿತ ಪ್ರಗತಿ ಬಗ್ಗೆ

ಪೂರ್ಣ ವಿವರಗಳು ಈ ಕೆಳಕಂಡಂತಿವೆ; ಕೆ.ಎಸ್.ಐ.ಐ.ಡಿ.ಸಿ. (ಕರ್ನಾಟಕ ಸರ್ಕಾರದ ಪರವಾಗಿ) ಎಫ್ರೋಟ್ಸ್ ಅಥಾರಿಟಿ ಆಫ್ ಇಂಡಿಯಾ (ಎಎಐ) ಮತ್ತು ಖಾಸಗಿ ವಲಯದ ಪಾಲುದಾರರಾದ ಸೀಮನ್ಸ್ ಕನ್ಸೋರ್ಷಿಯಮನ್ ನಡುವೆ ದಿ. 23ನೇ ಜನವರಿ 2002 ರಲ್ಲಿ ಷೇರುದಾರರ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಯೋಜನೆಯ ಅನುಷ್ಠಾನಕ್ಕಾಗಿ ಸೀಮಿತಗೊಳಿಸಲ್ಪಟ್ಟಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಮಂಡಳಿಯು (ಬಿಐಎಎಲ್) ದಿ. 16ನೇ ಮಾರ್ಚ್ 2002ರಂದು ಸೀಮನ್ಸ್ ಕನ್ಸೋರ್ಷಿಯಮ್ ರವರನ್ನೊಳಗೊಂಡ 8 ಮತ್ತು ಎಫ್ರೋಟ್ಸ್ ಅಥಾರಿಟಿ ಆಫ್ ಇಂಡಿಯಾರವರನ್ನೊಳಗೊಂಡ 2 ಸದಸ್ಯರನ್ನು ಸೇರ್ಪಡಿಸಿಕೊಂಡು ಪುನರ್‌ರಚಿಸಲಾಯಿತು. ದಿ. 30ನೇ ಸೆಪ್ಟೆಂಬರ್ 2002 ರಂದು ಹಣಕಾಸು ವಿಚಾರಗಳ ಮುಕ್ತಾಯಕ್ಕಾಗಿ ಹಾಗೂ ತದನಂತರ ಕೂಡಲೇ ನಿರ್ಮಾಣ ಕಾರ್ಯಾಚರಣೆ ಪ್ರಾರಂಭಿಸುವ ದಿಶೆಯಲ್ಲಿ ತಾಂತ್ರಿಕ ಮತ್ತು ಕಾನೂನು ಕುರಿತ ಅನೇಕ ವಿಷಯಗಳನ್ನು ಸಮಾನಾಂತರವಾಗಿ ಪರಿಷ್ಕರಿಸಲ್ಪಟ್ಟಿವೆ.

ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಾಸ್ಟರ್ ಪ್ಲಾನ್‌ನ ಅಂತಿಮ ತಿರುವು, ಸಂಚಾರಿ ಅಧ್ಯಯನ ಪೂರ್ಣಗೊಳಿಸುವಿಕೆ, ವ್ಯವಹಾರ ಯೋಜನೆಯ ಪೂರ್ಣಗೊಳಿಸುವಿಕೆ, ಇಂಜಿನೀಯರಿಂಗ್ ವಿವರ, ಇಪಿಸಿ ಬಿಡ್‌ಗಳನ್ನು ತಾಯರಿಸುವುದು ಹಾಗೂ ಇತರೆ ಪ್ರಗತಿಯಲ್ಲಿದೆ. ಕಾನೂನು ವಿಷಯಗಳಿಗೆ ಸಂಬಂಧಿಸಿದಂತೆ ಬಂಡವಾಳ ಶೇಖರಿಸುವ ಸಲುವಾಗಿ ಹಣಕಾಸು ಸಂಸ್ಥೆಗಳನ್ನು ಸಂಪರ್ಕಿಸುವ ಮುನ್ನ ತಯಾರಿಸಬೇಕಾದ ವಿವಿಧ ಯೋಜನಾ ಒಪ್ಪಂದಗಳ ಬಗ್ಗೆ ಇದೀಗ ಚರ್ಚಿಸಲಾಗುತ್ತಿದೆ: ವ್ಯವಹರಿಸಲಾಗುತ್ತಿದೆ. ಇವುಗಳು, ಎಫ್ರೋಟ್ಸ್ ಡೆವಲಪ್‌ಮೆಂಟ್ ಅಗ್ರಿಮೆಂಟ್ (ಎಡಿಎ), ರಾಜ್ಯ ಬೆಂಬಲ ಒಪ್ಪಂದ (ಎಸ್‌ಎಸ್‌ಎ) ಮತ್ತು ಲ್ಯಾಂಡ್ ಲೀನ್ ಒಪ್ಪಂದ (ಎಲ್‌ಎಲ್‌ಎ)ಗಳನ್ನು ಒಳಗೊಂಡಿರುತ್ತದೆ.

ಆ) 23ನೇ ಜನವರಿ 2002ರಂದು ಸಹಿ ಹಾಕಲಾದ ಷೇರುದಾರರ ಒಪ್ಪಂದದ ಅನ್ವಯ ಸೆಪ್ಟೆಂಬರ್ ಮಾಹೆ 2002ರಲ್ಲಿ ಹಣಕಾಸು ವಿಚಾರಗಳ ಮುಕ್ತಾಯದ ಸಾಧ್ಯತೆಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಅದರಂತೆ, ಕಾಮಗಾರಿಯ ಬಹುಶಃ ಈ ಸಾಲಿನ ಕೊನೆಯ ತೈಮಾಸದಲ್ಲಿ ಪ್ರಾರಂಭಗೊಳ್ಳುವುದು.